**ದಿನಾಂಕ: 19-12-2020 ರಂದು ಬೆಳಗ್ಗೆ 10:30 ಗಂಟೆಗೆ ವಾರ್ಡ್ ಸಂಖ್ಯೆ 166 ಕರೀಸಂದ್ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

*ಹಾಜರಿದ್ದ ಅಧಿಕಾರಿಗಳು:-*

1. ಶ್ರೀ. ಪ್ರದೀಪ್ ರಾಥೋಡ್ - ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ನಾಗರಾಜ. ಸಿ. ಎಸ್ - ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 166 ಕರೀಸಂದ್ರ)
3. ಶ್ರೀ. ಶ್ರೀನಿವಾಸ್ - ಕಂದಾಯ ಪರಿವೀಕ್ಷಕರು (ವಾರ್ಡ್ 166 ಕರೀಸಂದ್ರ)
4. ಶ್ರೀ. ರುದ್ರೇಶ್ - ಸಹಾಯಕ ಅಭಿಯಂತರರು (ಬೆಸ್ಕಾಂ)
5. ಶ್ರೀ. ನರಸಿಂಹಲು - ಹಿ.ಆ.ಪ- (ವಾರ್ಡ್ 166 ಕರೀಸಂದ್ರ)
6. ಶ್ರೀ. ಕಾರ್ತಿಕ್ - ಕಿ.ಆ.ಪ (ಹೊರಗುತ್ತಿಗೆ ಆಧಾರದ ಮೇಲೆ) (ವಾರ್ಡ್ 166 ಕರೀಸಂದ್ರ)

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 166 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ವಾರ್ಡ್ ಸಮಿತಿ ಸಭೆಯಲ್ಲಿ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಾರ್ಡ್ ವ್ಯಾಪ್ತಿಯ ಜಲಮಂಡಳಿ, ಬೆಸ್ಕಾಂ, ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಇಲಾಖೆ, ಕಂದಾಯ, ಕಾಮಗಾರಿ ಇಲಾಖೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

ವಾರ್ಡ್ ವ್ಯಾಪ್ತಿಯಲ್ಲಿ ಕಳೆದ 15 ದಿನಗಳಿಂದ ಸ್ವೀಕೃತವಾಗಿರುವ ಅಂತರ್ಜಾಲ ದೂರುಗಳು, ಲಿಖಿತ ದೂರುಗಳು ಹಾಗೂ ಸಾರ್ವಜನಿಕರ ಮೌಖಿಕ ದೂರುಗಳು ಹಾಗೂ ಇನ್ನಿತರೆ ಸ್ಥಳೀಯ ಸಂಸ್ಥೆಗಳಿಂದ ದೂರುಗಳನ್ನು ಕಾಲಕಾಲಕ್ಕೆ ಪರಿಹಾರ ಮಾಡಲಾಗಿರುವ ಬಗ್ಗೆ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಿಗೆ ವಿವರಿಸಲಾಯಿತು.

ಸಮಿತಿ ಸಭೆಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಪ್ರಸ್ತುತ ಕಂಡುಬಂದಿರುವ ಕೋವಿಡ್-19 ರೋಗಿಗಳ ವಿವರಗಳನ್ನು ವಾರ್ಡ್‌ನ ಹಿರಿಯ ಆರೋಗ್ಯ ಪರಿವೀಕ್ಷಕರಿಂದ ಕಳೆದ ನಾಲ್ಕು ತಿಂಗಳಿನ ಟೆಸ್ಟಿಂಗ್ ಮಾಹಿತಿಯನ್ನು ನೀಡಲು ಅಧ್ಯಕ್ಷರು ಸೂಚಿಸಿದರು. ಸದರಿ ರೋಗದ ಹರಡುವಿಕೆಯನ್ನು ತಡೆಗಟ್ಟುವ ಸಂಬಂಧ ಕೈಗೊಳ್ಳಾಲಾಗುತ್ತಿರುವ ಕ್ರಮಗಳ ಕುರಿತು ಚರ್ಚಿಸಿದಂತೆ ಕೋವಿಡ್-19 ಟೆಸ್ಟಿಂಗ್ ಕಾರ್ಯವನ್ನು ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚುವರಿಯಾಗಿ ಕೈಗೊಳ್ಳಲು ಕ್ರಮ ವಹಿಸಲಾಗಿರುತ್ತದೆ.

ಹಿಂದಿನ ಸಭೆಯಲ್ಲಿ ಸಮಿತಿ ಸದಸ್ಯರು ಮಾತನಾಡಿ ಕರೀಸಂದ್ರ ವಾರ್ಡ್‌ನ ಕೆಲವು ರಸ್ತೆಗಳ ಬೀದಿ ದೀಪಗಳು ಸರಿಯಾಗಿ ಕಾರ್ಯನಿರ್ವಹಿಸದೇ ಇರುವ ಬಗ್ಗೆ ಹಾಗೂ ಅದನ್ನು ಕೂಡಲೇ ಸರಿಪಡಿಸುವ ಬಗ್ಗೆ ಕೋರಿದ್ದರ ಮೇರೆಗೆ ಅಧ್ಯಕ್ಷರು ಸದರಿ ಸಮಸ್ಯೆಯನ್ನು ವಿದ್ಯುತ್ ದಕ್ಷಿಣ ವಿಭಾಗದವರಿಗೆ ಸೂಕ್ತ ಕ್ರಮ ಕೈಗೊಂಡು ಸಮಸ್ಯೆಯನ್ನು ಪರಿಹರಿಸುವಂತೆ ಸೂಚಿಸಿದರು.

ವಾರ್ಡಿನಲ್ಲಿ ರಸ್ತೆಗುಂಡಿಗಳ ಬಗ್ಗೆ ಚರ್ಚಿಸಲಾಗಿ ಹೊಸದಾಗಿ ಗುರುತಿಸಲಾದ ರಸ್ತೆಗುಂಡಿಗಳನ್ನು ಜಲಮಂಡಳಿ ರವರು 27ನೇ ಅಡ್ಡರಸ್ತೆ 7ನೇ ಬ್ಲಾಕ್ ಜಯನಗರ ಇಲ್ಲಿ ರಸ್ತೆ ಅಗೆತವನ್ನು ಮುಚ್ಚಿರುವುದಿಲ್ಲ. ಕೂಡಲೇ ರಸ್ತೆ ಅಗೆತಗಳನ್ನು ಮುಚ್ಚಲು ಅಗತ್ಯಕ್ರಮ ಕೈಗೊಳ್ಳುವ ಬಗ್ಗೆ ಅಧ್ಯಕ್ಷರು ರವರು ತುರ್ತಾಗಿ ನಿರ್ವಹಿಸಲು ಜಲಮಂಡಳಿ ಅಧಿಕಾರಿಗಳಿಗೆ ಸೂಚಿಸಲಾಯಿತು.

ವಾರ್ಡ್ ಸಂಖ್ಯೆ 166 ರ ವ್ಯಾಪ್ತಿಯಲ್ಲಿ ಕಾವೇರಿನಗರ ಮತ್ತು ಕರೀಸಂದ್ರದಲ್ಲಿ ಪಾಲಿಕೆ ಸ್ವತ್ತಿಗೆ ಸಂಬಂಧಿಸಿದಂತೆ ಪಿಐಡಿ ಸಂಖ್ಯೆಗಳನ್ನು ನೀಡುವ ಸಂಬಂಧ ಅಗತ್ಯ ಕ್ರಮಕೈಗೊಳ್ಳಲು ಕಂದಾಯ ವಿಭಾಗದ ಅಧಿಕಾರಿಗಳಿಗೆ ಸೂಚಿಸಿ ಈ ಕುರಿತು ಜಂಟಿ ತಪಾಸಣೆ ಕೈಗೊಂಡು ಮುಂದಿನ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ಪಾದಚಾರಿ ಮಾರ್ಗದಲ್ಲಿ ಬೆಸ್ಕಾಂ ವತಿಯಿಂದ ಟ್ರಾನ್ಸ್‌ಫಾರ್ಮರ್‌ಗಳು ಹಾಗೂ ತಂತಿ ಬೇಲಿಗಳು ಅಳವಡಿಸಿದ್ದು ಎರಡು ಕಂಬ ಟಿಸಿಗಳನ್ನು ಬದಲಾಯಿಸಿ ಒಂದು ಕಂಬ ಟಿಸಿಗಳನ್ನು ಅಳವಡಿಸಲು ಸೂಚಿಸಲಾಯಿತು ಹಾಗೂ ಬಿದ್ದ ಕಂಬಗಳನ್ನು ತೆರವುಗೊಳಿಸಲು ಮತ್ತು ಮರದ ರೆಂಬೆಗಳನ್ನು ಕತ್ತರಿಸಿದ ನಂತರ ಸ್ಥಳದಿಂದ ತೆರವುಗೊಳಿಸಲು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಯಿತು.

ಮಾನ್ಯ ಆಯುಕ್ತರ ಆದೇಶನುಸಾರ ಮೈ ಸಿಟಿ ಮೈ ಬಡ್ಜೆಟ್ ಯೋಜನೆಯಲ್ಲಿ ಸೂಚಿಸಿರುವಂತೆ ವಾರ್ಡ್ ವ್ಯಾಪ್ತಿಯಲ್ಲಿ 9ನೇ ಮುಖ್ಯರಸ್ತೆಯ DWCC/ಸಮುದಾಯ ಭವನದ ಹತ್ತಿರ ಮತ್ತು ಕೈಗಾರಿಕ ಬಡಾವಣೆ ಕಾವೇರಿನಗರ ಇಲ್ಲಿ ಶೌಚಾಲಾಯಗಳನ್ನು ನಿರ್ಮಿಸುವ ಬಗ್ಗೆ ಮಾನ್ಯ ಆಯುಕ್ತರು ರವರಿಗೆ ಪ್ರಸ್ತಾವನೆ ಸಲ್ಲಿಸಲು ಕಾಮಗಾರಿ ಇಲಾಖೆಗೆ ಸೂಚಿಸಲಾಯಿತು.

ಬನಶಂಕರಿ ಸಂಚಾರ ಪೋಲೀಸ್ ಠಾಣೆ ಸರಹದ್ದಿನ ಮೋನೋಟೈಪ್ ರಸ್ತೆ, ಕೆ.ಆರ್ ರಸ್ತೆ ಮತ್ತು ಜೆ. ಬಿ. ರಸ್ತೆ ಈ ಮೂರು ರಸ್ತೆಗಳಿಗೆ ಅಥವಾ ಪೈ ವಿಸ್ತಾ ಹೋಟೆಲ್ ಜಂಕ್ಷನ್‌ನಲ್ಲಿ ರಸ್ತೆ ಉಬ್ಬುಗಳನ್ನು ಅಳವಡಿಸಲು ಬನಶಂಕರಿ ಸಂಚಾರಿ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ರವರು ಕೋರಿರುತ್ತಾರೆ. ಇವರ ಕೋರಿಕೆಯ ಬಗ್ಗೆ ಕ್ರಮ ಕೈಗೊಳ್ಳಲು ಟಿಇಸಿ ಕಾರ್ಯಪಾಲಕ ಅಭಿಯಂತರರು ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಶ್ರೀ. ಪ್ರದೀಪ್ ರಾಥೋಡ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

AE 21/12/20

ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 166